6

# ಬೈಬಲಿನ ಪ್ರಭಾವ

ಬೈಬಲಿನ ತತ್ವವು ಪ್ರಭಾವದಲ್ಲಿ ಬಲವುಳ್ಳದ್ದಾಗಿರುವುದು, ಹಾಗೂ ಅಂಥ ಪ್ರಭಾವವು (ಜಯಿಸುವಂಥದ್ದಲ್ಲ) ಒಡಂಬಡಿಸುವದರ ಪರಿಣಾಮವಾಗಿರುವವೆಂಬುದು ಪುರಾತನ ಬೈಬಲಿನ ಮುಂತಿಳಿಸುವಿಕೆಯ ವಿಷಯಗಳಿರುವವು. ವಿಶಾಲವಾದ ಸಂಖ್ಯೆಗಳಲ್ಲಿ ಜನರು ಮಾರ್ಪಾಟಗೊಳ್ಳ ಬೇಕಾಗಿದ್ದರೂ, ಕ್ರೈಸ್ತತ್ವದ ಉದ್ದೇಶವು ಸಂಖ್ಯೆಗಳನ್ನು ಎಣಿಸುವುದಾಗಿರುವದಿಲ್ಲ. ಅದರ ಪ್ರಾಥಮಿಕ ಉದ್ದೇಶವು ನೈತಿಕವಾಗಿಯೂ ಆತ್ಮಿಕವಾಗಿಯೂ ಜನರ ಮೇಲೆ ಪರಿಣಾಮ ಮಾಡುವುದೂ ಹೊಸದಾಗಿ ಜೀವಿಗಳು ಹುಟ್ಟುವಂತೆ ಮಾಡುವುದೂ ಆಗಿದೆ. ಕ್ರೈಸ್ತತ್ವದ ಪ್ರಭಾವದ ಕಥೆಯು, ಅತೀ ಬಹಳವಾಗಿ ಮನಗಾಣಿಸುವ ಪರಲೋಕದ ಮೂಲದ  ರುಜುವಾತುಗಳಲ್ಲಿ ಒಂದನ್ನು ಒದಗಿಸುತ್ತದೆ.

## ದಯಾಭಾವದ ಉಪಚಾರ

ಒಳ್ಳೇ ಸಮಾರ್ಯದವನ ಕಥೆಯಲ್ಲಿ, ವಿದೇಶಿಯರೂ ಪ್ರೀತಿಸಲ್ಪಡಬೇಕಾದ ಹಾಗೂ ಸಹಾಯ ಮಾಡಲ್ಪಡಬೇಕಾದ ನೆರೆಯವರಾಗಿರುವರು ಎಂಬುದನ್ನು ಯೇಸುವು ಬೋಧಿಸಿದ್ದಾನೆ. ಹೀಗೆ ಯೇಸುವು ಎಲ್ಲರನ್ನು ಸಹೋದರರನ್ನಾಗಿ ಮಾಡಿದ್ದಾನೆ ಮತ್ತು ಎಲ್ಲಾ ಜನರೂ ದಯಾಭಾವದಿಂದ ನಡಿಸಿಕೊಳ್ಳಲ್ಪಡಬೇಕೆಂಬ ತನ್ನ ಚಿತ್ತವನ್ನು ತೋರಿಸಿದ್ದಾನೆ.

### ಮಕ್ಕಳು

ಆತನು ಕಾರ್ಯನಿರತನಾಗಿದ್ದರೂ ಚಿಕ್ಕಮಕ್ಕಳನ್ನು ತನ್ನ ತೋಳುಗಳಲ್ಲಿ ಎತ್ತಿಕೊಳ್ಳುವದಕ್ಕೆ ಸಮಯ ಕೊಟ್ಟನು. ಚಿಕ್ಕವರ ಕಡೆಗೆ ಆತನ ಕೃತಿಗಳೂ ಮನೋಭಾವನೆಗಳೂ ಮಿಲಿಯನ್ ಗಟ್ಟಲೆ ಜನರ ಮೇಲೆ ಪರಿಣಾಮ ಮಾಡಿವೆ. ಕ್ರೈಸ್ತತ್ವವನ್ನು ಸ್ವೀಕರಿಸಿದವರು - ಹಾಗೂ ಅನೇಕ ಇತರರೂ ಸಹ - ಮಕ್ಕಳನ್ನು ಅಲಕ್ಷಿಸುವದರ ಅಮಾನುಷಿಕತೆಯನ್ನೂ ಕ್ರೂರತ್ವವನ್ನೂ ನೋಡಲು ಪ್ರಾರಂಭಿಸಿದರು. ಅಂಥ ರೂಢಿಗಳಿಗೆ ವಿರುದ್ಧವಾಗಿ ಬೋಧಿಸಲು ಪ್ರಾರಂಭಿಸಿದರು. ಅವುಗಳನ್ನು ಬದಲಾಯಿಸಲು ಪ್ರಯತ್ನಿಸಿದರು. ಶೈಶವಾವಸ್ಥೆಯನ್ನೂ ಬಾಲ್ಯವನ್ನೂ ಜೀವನದ ಆ ಅವಧಿಗಳನ್ನು ಪವಿತ್ರೀಕರಿಸುವಂತೆ ಯೇಸು ಅನುಭವಿಸಿದನೆಂದು ಹೇಳಲ್ಪಟ್ಟಿದೆ. ಜೀವದ ಮೌಲ್ಯತೆಯನ್ನು ಕುರಿತು ಯೇಸುವಿನ ಬೋಧನೆಯ ಪರಿಣಾಮವು ಚಕ್ರವರ್ತಿಯ ಅರಮನೆಯಲ್ಲಿಯೂ ಪ್ರಭಾವ ಬೀರಿತು ಮತ್ತು ಇಪ್ಪತ್ತು ಶತಮಾನಗಳ ನಂತರ ಆ ಪ್ರಭಾವವು ಇನ್ನೂ ಕಾರ್ಯಸಾಧಕ ವಾದದ್ದಾಗಿದೆ. ಕ್ರೈಸ್ತರಲ್ಲದ ಮಿಲಿಯನ್‌ಗಟ್ಟಲೆ ಜನರು ಚಿಕ್ಕಮಗುವು ಕೆಟ್ಟದ್ದಾಗಿ ನಡಿಸಿಕೊಳ್ಳುವದರ ವಿಚಾರದ ಬಗ್ಗೆ ಭಯಾನಕತೆ ಹೊಂದಿದ್ದಾರೆ.

**ಮಹಿಳೆಯರು**

ಯೇಸುವಿನ ಕಾರ್ಯದಲ್ಲಿ ಮಹಿಳೆಯರು ಭಾಗಿಗಳಾಗಿದ್ದರು. ಆತನು ಅವರ ಸಹಾಯವನ್ನು ಸ್ವೀಕರಿಸಿದ್ದು ಹಾಗು ಅವರ ಹಕ್ಕುಗಳನ್ನು ಕಾಪಾಡಿದ್ದು ಜಗತ್ತಿನ ಚರಿತ್ರೆಯ ಮೇಲೆ ದೊಡ್ಡ ಪರಿಣಾಮ ಮಾಡಿದೆ. ಪೂರ್ವಕಾಲದಲ್ಲಿ ಮಹಿಳೆಯ ಪರಿಸ್ಥಿತಿಯು ಗುಲಾಮರ ಪರಿಸ್ಥಿತಿಗಿಂತ ಚೆನ್ನಾಗಿರಲಿಲ್ಲ. ಮದುವೆಯಾದರೆ, ಆಕೆ ತನ್ನ ಗಂಡನ ಸ್ವಾಸ್ಥ್ಯವಾಗಿರುತ್ತಿದ್ದಳು; ಮದುವೆಯಾಗದೇ, ಉಳಿದುಕೊಂಡರೆ ಪುರುಷನ ಆಟದ ವಸ್ತು ಇಲ್ಲವೇ ದಾಸಿ. ಆಕೆ ಎಂದೂ ಅವನಿಗೆ ಸರಿಸಮನಾಗಿ ಉಳಿದಿರಲಿಲ್ಲ.

ಅತ್ಯುನ್ನತ ಮನಸ್ಸುಗಳಲ್ಲಿಯೂ ಸಹ ಮಹಿಳೆಯರು ತಿರಸ್ಕಾರದ ಸಂಶಯ ಕ್ಕೊಳಗಾಗಿದ್ದರು. ಸಿಸೆರೋನಿಗೆ ಎಂದಾದರೂ ತಾಯಿಯಿದ್ದಳೋ ಎಂಬುದು ಅವನ ವಿಪುಲವಾದ ಬರಹಗಳಿಂದ ಯಾರೂ ಎಂದೂ ತಿಳಿದು ಕೊಳ್ಳಲಾರರು ಎಂದು ಹೇಳಲ್ಪಟ್ಟಿದೆ. ಹೊಸ ಒಡಂಬಡಿಕೆಯು ಔಗುಸ್ತನ ಯುಗದಲ್ಲಿಯ ಎಲ್ಲಾ ಬರಹಗಳಲ್ಲಿ ಕಂಡು ಬರುವದಕ್ಕಿಂತ ಹೆಚ್ಚು ಮಹಿಳೆಯರ ಹೆಸರುಗಳನ್ನು ಹೇಳಿದೆ ಮತ್ತು ಅವರನ್ನು ಗೌರವಿಸಿದೆ. ಅನ್ಯನಾದ ಜ್ಞಾನಿಯು ಮತ್ತು ಧರ್ಮದ್ರೋಹಿಯೂ ಆದ ಚಕ್ರವರ್ತಿ ಜೂಲಿಯನ್‌ನ ಖಾಸಗಿ ಶಿಕ್ಷಕ ಅಬಾನಿಯಸ್‌ನು ಅಂತುಸಾ ಎಂಬ ಕ್ರೈಸ್ತ ತಾಯಿಯನ್ನು ಗಮನಿಸಿದನು. ಹಾಗೂ "ಕ್ರೈಸ್ತರಿಗೆ ಎಂತಹಾ ಸ್ತ್ರೀಯಂದಿರುವರು!" ಎಂದು ಆಶ್ಚರ್ಯವನ್ನು ವ್ಯಕ್ತಪರಿಸಿದನು. ಕ್ರೈಸ್ತನನ್ನು ಸ್ವೀಕರಿಸದೇ ಇದ್ದ ಮಿಲಿಯನ್‌ಗಟ್ಟಲೆ ಪುರುಷರು ಮಹಿಳೆಯರ ಬೆಲೆಯ ಬಗ್ಗೆ ಆತನ ಬೋಧನೆಯ ಕೆಲವೊಂದು ರೂಪಗಳನ್ನು ಸ್ವೀಕರಿಸುತ್ತಿರುವರು.

**ಮದುವೆ ಮತ್ತು ಮನೆ**

ಮದುವೆಯ ಮಹತ್ವ ಮತ್ತು ಪರಿಶುದ್ಧತೆಯು ಬೈಬಲನ್ನು ಗೌರವಿಸದೇ ಇರುವವರ ಮಧ್ಯದಲ್ಲಿ ಯಾವಾಗಲೂ ಯೋಚಿಸಲ್ಪಟ್ಟಿರುವದಿಲ್ಲ. ಮನೆ ಮತ್ತು ಮದುವೆಯು ರೋಮನ್‌ಲಿಂದ ದ್ವೇಷಿಸಲ್ಪಡುತ್ತಿತ್ತು. ಕುಟುಂಬದ ಘಟಕದ ಅವನತಿಯು ರಾಜ್ಯಕ್ಕೆ ನಾಶನ ಕಾರಿಯಾಗಿರುವದರಿಂದ ಔಗುಸ್ತನು ಮದುವೆಯಾಗದವರ ಮೇಲೆ ಕರಗಳನ್ನು ವಿಧಿಸುವಷ್ಟರ ಮಟ್ಟಿಗೆ ಮದುವೆಯು ತಪ್ಪಿಸಿಕೊಳ್ಳಲ್ಪಡುತ್ತಿತ್ತು. ಮದುವೆಯಾದವರಲ್ಲಿಯೂ - ಯಾವುದೇ ಜನಾಂಗದ ಬಲವೂ ಮಹಿಮೆಯೂ ಆಗಿರುವ - ನೈತಿಕತೆಯು ತಿಳಿದಿರಲಿಲ್ಲ. ಒಬ್ಬ ಲೇಖಕನು ಹೇಳುವಂತೆ, "ಮದುವೆಯ ಬಂಧನಗಳು ಕಳೆದು ಕೊಳ್ಳಲ್ಪಡಲು ಸುಲಭವಾಗಿದ್ದವು. ಯಾಕಂದರೆ ಅದನ್ನು ಹೊಂದಿಕೊಳ್ಳುವದರಲ್ಲಿ ಅವರು ಮೃಗಗಳ್ಳರಾಗಿದ್ದರು" ವಿಗ್ರಹಾರಾಧಕ ರೋಮನ್‌ರಲ್ಲಿ ವಿವಾಹ ವಿಚ್ಛೇದನವು ಹೆಚ್ಚಾಗಿದ್ದದ್ದು, ಕ್ರೈಸ್ತ ರಾಷ್ಟ್ರವಾಗಿ ಪ್ರಾರಂಭವಾದ ಯು. ಎಸ್. ದಲ್ಲಿಯ ವಿವಾಹ ವಿಚ್ಛೇದನಗಳು ಹೆಚ್ಚಾದದ್ದನ್ನು ಜ್ಞಾಪಕಕ್ಕೆ ತರುತ್ತದೆ. ಕ್ರಿಸ್ತನನ್ನು ಗಂಭೀರವಾಗಿ ಹಿಂಬಾಲಿಸುವವರಲ್ಲಿ ಕ್ರೈಸ್ತತ್ವದ ಪ್ರಭಾವವು ಮನೆಗಳನ್ನು ಒಂದುಗೂಡಿಸುತ್ತದೆ ಹಾಗೂ ಮದುವೆಯ ಪ್ರತಿಜ್ಞೆಗಳನ್ನು ಪವಿತ್ರವಾಗಿ ಕಾಪಾಡುತ್ತವೆ.

**ಬಡವರು ಹಾಗೂ ಅಸ್ವಸ್ಥರು**

ಗ್ರೀಕ್ ಮತ್ತು ರೋಮನ್ ಧರ್ಮವಾಗಲೀ, ತತ್ವಜ್ಞಾನವಾಗಲೀ ಬಡವರನ್ನು ಆದರಿಸುವಂಥದ್ದಾಗಿರಲಿಲ್ಲ. ಅವರು ಆರಾಧಿಸುತ್ತಿದ್ದ ದೇವತೆಗಳು ಕ್ರೂರಜೀವಿಗಳಾಗಿ ಚಿತ್ರಿಸಲ್ಪಟ್ಟಿವೆ. ಅನ್ಯ ನಾಡುಗಳಲ್ಲಿ ದಯೆಯ ಸಂಸ್ಥೆಗಳು ಇರಲೇ ಇಲ್ಲ.

"ಘೋಷಿಸುವದರೊಂದಿಗೆ ಬಡಮನುಷ್ಯನನ್ನು ಓಡಿಸದೇ ನಿನ್ನನ್ನು ನೀನೇ ಹೇಗೆ

ಕಡಿಮೆಮಾಡಿಕೊಳ್ಳುತ್ತಿರುವೆ?" ಎಂಬುದು ಒಬ್ಬ ಐಶ್ವರ್ಯವಂತ ರೋಮನ್ನನು ಇನ್ನೊಬ್ಬನಿಗೆ ಕೇಳಿದ ಪ್ರಶ್ನೆಯಾಗಿತ್ತು. ಭಿಕ್ಷಕರ ದೊಡ್ಡ ಗುಂಪುಗಳು ರೋಮಿನಲ್ಲಿ ಯಾವಾಗಲಾದರೊಮ್ಮೆ ಭಿಕ್ಷೆಯನ್ನು ಪಡೆಯುತ್ತಿದ್ದವು. ಆದರೆ ಇದು ತಾತ್ಸಾರದಿಂದ ಕೊಡಲ್ಪಡುತ್ತಿತ್ತು. ಇದಕ್ಕೆ ವಿರೋಧವಾಗಿ, ಕ್ರೈಸ್ತರು ಭಿಕ್ಷಕರಲ್ಲಿ ಹಾಗೂ ಕಷ್ಟಕ್ಕೆ ಗುರಿಯಾದವರಲ್ಲಿ ದೇವರ ರೂಪವನ್ನು ನೋಡಿ ಸಹಾಯ ಹೀನರಿಗೆ ಸಹಾಯ ಮಾಡಿದರು. ವಿಗ್ರಹಾರಾಧಿಕರಿಂದ ಗೌರವವನ್ನು ಗಳಿಸಿದರು. ಈಗಲೂ ಸಹ ಮಾನವ ಹಕ್ಕುಗಳ ಮೇಲೆ ನಾಸ್ತಿಕರು ಕ್ರೈಸ್ತತ್ವದ ಪ್ರಭಾವವನ್ನು ಮಿತಿಗೊಳಿಸುವವರಾದರೂ ಈ ಹಕ್ಕುಗಳನ್ನು ಕ್ರೈಸ್ತರು ಪ್ರತಿಪಾದಿಸುತ್ತ ನಡೆದಿರುವುದು ಸತ್ಯವಾಗಿ ಉಳಿದಿದೆ. ಇತರ ಧರ್ಮಗಳ ದಬ್ಬಾಳಿಕೆಯ ದೇಶಗಳಲ್ಲಿ ಇಂಥ ಅವಕಾಶಗಳು ಅಸ್ತಿತ್ವದಲ್ಲಿರುವದಿಲ್ಲ.

ಇದಲ್ಲದೇ, ಆಹಾರವಿಲ್ಲದಿರುವವರಿಗಾಗಿ ಕ್ರಿಸ್ತನ ಕರುಣೆಯ ಪರಿಣಾಮವು ಆಧುನಿಕ ಸಮಾಜದಲ್ಲಿ ಪ್ರತಿಬಿಂಬಿಸಲ್ಪಟ್ಟಿದೆ. ಆತನ ಶಿಷ್ಯರಲ್ಲಿ ಮಾತ್ರವಲ್ಲದೇ ಕ್ರೈಸ್ತರಾದ ಮಿಲಿಯಗಟ್ಟಲೆ ಜನರ ಮಧ್ಯದಲ್ಲಿಯೂ ಇದು ಸತ್ಯವಾಗಿದೆ. ಮಿಲಿಯಗಟ್ಟಲೆ ಕ್ರೈಸ್ತೇತರರ ಹೃದಯಗಳಲ್ಲಿಯೂ ಬೈಬಲಿನ ಬೋಧನೆಗಳು ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಕರುಣೆಯ ಕಾರ್ಯಗಳು ಉತ್ತೇಜಿಸಲ್ಪಟ್ಟಿವೆ.

**ಖಡ್ಗ ಮಲ್ಲರ ಕಾದಾಟ**

ವಿನೋದದ ನೀತಿಭ್ರಷ್ಟ ಭಾವನೆಯು ಅಸಹ್ಯವಾದ ಖಡ್ಗ ಮಲ್ಲರ ಕಾದಾಟದಿಂದ ತೃಪ್ತಿಪಡಿಸಿಕೊಳ್ಳಲ್ಪಡುತ್ತಿತ್ತು. ಅಂಥ ಅಮಾನುಷ ಕ್ರೂರತನವೂ ಸಂಪೂರ್ಣವಾಗಿ ನಿಲ್ಲಿಸಲ್ಪಟ್ಟದ್ದಕ್ಕಾಗಿ ಕ್ರೈಸ್ತತ್ವದ ಪ್ರಭಾವಕ್ಕಾಗಿ ಗೌರವ ಕೊಡಲ್ಪಡತಕ್ಕದ್ದು.

**ಗುಲಾಮತ್ವ**

ಕ್ರಿಸ್ತನ ಸಮಯದಲ್ಲಿ ರೋಮ್ ಸಾಮ್ರಾಜ್ಯವು ಅರವತ್ತು ಮಿಲಿಯನ್ ಸ್ವತಂತ್ರ ಜನರಿಂದಲೂ, ಅರವತ್ತು ಮಿಲಿಯನ್ ಗುಲಾಮರಿಂದಲೂ ತುಂಬಿಕೊಂಡಿತ್ತು. ಗುಲಾಮರಾಗಿದ್ದ ಮಾನವರು ಭೂಮಿಗಿಂತಲೂ ಇಲ್ಲವೇ ದನಗಳಿಗಿಂತಲೂ ಕಡಿಮೆಯಾದವರು ಎಂದು ತಿಳಿಯಲ್ಪಡುತ್ತಿದ್ದರು. ಉಳುವ ಎತ್ತನ್ನು ಕೊಂದವನು ಮರಣಹೊಂದಬೇಕು ಎಂದು ರೋಮನ್ ಕಾನೂನು ಹೇಳುತ್ತಿತ್ತು. ಆದರೆ ಗುಲಾಮನನ್ನು ಕೊಲೆ ಮಾಡಿದವನಿಗೆ ಆ ನಿಯಮವಿರಲಿಲ್ಲ. ಜನರ ಮೋಜಿಗಾಗಿ ಒಂದು ಸಮಯದಲ್ಲಿ ಆಂಫಿಥಿಯೇಟರ್ ಟ್ರೀಜನ್ ಒತ್ತಾಯ ಮಾಡಿದನು.

ಕ್ರೈಸ್ತತ್ವವು ಯಾವುದೇ ಕ್ರಾಂತಿಯನ್ನು ಪ್ರಸಂಗಿಸದಿದ್ದರೂ ಅದು, "ಪಕ್ಷಪಾತವಿಲ್ಲದ ನ್ಯಾಯ ಮತ್ತು ಸ್ವಾರ್ಥತ್ಯಾಗ, ಪ್ರೀತಿ ಮತ್ತು ಸಹೋದರತ್ವದ ಸಮಾನತೆಯ ಬಲದಿಂದ ಗುಲಾಮತನವನ್ನು ತೆಗೆದು ಹಾಕಿತು." ಸಾರ್ವತ್ರಿಕ ಸಹೋದರತ್ವದ ಮಹಾ ಬೋಧ ನೆಯು ಗುಲಾಮತನದ ತಿರಸ್ಕೃತ ಅಪರಾಧದ ಬೇರಿಗೆ ಕೊಡಲಿ ಪೆಟ್ಟು ಹಾಕುವದಕ್ಕೆ ಹೋಲಿಸಲ್ಪಟ್ಟಿದೆ. ಈಗ ಪ್ರತಿಯೊಂದು ನಾಗರಿಕ ದೇಶದಲ್ಲಿ ಗುಲಾಮರ ಹೆಸರು ತಿಳಿಯದಂಥದ್ದಾಗಿದೆ.

**ಯುದ್ಧ**

ಸಾರ್ವತ್ರಿಕ ಸಹೋದರತ್ವದ ಬಗೆಗಿನ ಕ್ರೈಸ್ತ ಬೋಧನೆಯನ್ನು ಎಲ್ಲಾ ಜನಾಂಗಗಳು ಸ್ವೀಕರಿಸಿದರೆ ಯುದ್ಧಗಳು ಸಂಪೂರ್ಣವಾಗಿ ಇಲ್ಲವಾಗಿ ಹೋಗುವವು.

ಸಹೋದರರರಂತೆ ಜೀವಿಸುವದರಲ್ಲಿ ಮಾನವ ಕುಲವು ಸೋತು ಹೋಗಿದ್ದರೂ, ಕ್ರೈಸ್ತತ್ವವು ಪ್ರಸಾರವಾಗುವಲ್ಲೆಲ್ಲಾ ಯುದ್ಧಕ್ಕಾಗಿರುವ ಅಪೇಕ್ಷೆಯು ಸತ್ತು ಹೋಗುವುದು. ಜಯದ ಯುದ್ಧಗಳು ಕ್ರಿಸ್ತನಿಗೆ ಸಮರ್ಪಿಸಿಕೊಂಡವರಿಂದ ಪ್ರಾರಂಭಿಸಲ್ಪಡಲಿಲ್ಲ. ಯುದ್ಧದ ಭಯಾನಕತೆಗಳನ್ನು ಕಡಿಮೆಗೊಳಿಸುವದರಲ್ಲಿ ಕ್ರೈಸ್ತತ್ವವು ಪ್ರಭಾವ ಬೀರಿದೆ. ಕ್ರೈಸ್ತರೆಂದು ಹೇಳಿಕೊಳ್ಳುವವರಿಂದ ಸೆರೆಯಲ್ಲಿದ್ದವರಿಗೆ ಹೆಚ್ಚು ಗೌರವವು ಕೊಡಲ್ಪಟ್ಟಿದೆ. ಪ್ರತಿಭಟಿಸಿದ ರಾಷ್ಟ್ರಗಳಿಗೆ ಬಿಡುಗಡೆಯು ಕೊಡಲ್ಪಟ್ಟಿದೆ. ಗಾಯಗೊಂಡ ಸೈನಿಕರ ಜೋಪಾಸನೆ ಮತ್ತು ವಾಸಿಮಾಡುವಿಕೆಗಳು ಪುರಾತನ ಸಮಯಗಳಲ್ಲಿ ಯಾರೂ ಕನಸ್ಸು ಕಾಣದಂಥ ಆಚರಣೆಗಳಾಗಿದ್ದವು. ಹೀಗೆ ಯೇಸುವಿನ ಮಾನವೀಕರಣದ ಸ್ಪರ್ಷವು ಆತನ ಧರ್ಮವನ್ನು ಅನುಸರಿಸದವರ ಮೇಲೆಯೂ ಪರಿಣಾಮ ಮಾಡಿದೆ.

ಸಮಾಧಾನದ ರಾಜನ ಅನುಯಾಯಿಗಳು ಯುದ್ಧಗಳಿಗೆ ಕಾರಣರಾಗಿದ್ದಾರೆ ಎಂಬ ದೂರಿಗೆ ಉತ್ತರವಾಗಿ, ಹಾಗೇ ಮಾಡುವದರಲ್ಲಿ ಅವರು ತಮ್ಮ ನಾಯಕನ ತತ್ವಗಳಿಂದ ದೂರ ಹೋಗಿದ್ದಾರೆ ಎಂದು ಹೇಳುವುದು ಸಾಕಷ್ಟಾಗಿದೆ.

## ವಿಗ್ರಹಾರಾಧನೆಯ ಕ್ಷೀಣಿಸುವಿಕೆ

ವಿಗ್ರಹಾರಾಧಕರ ಮಧ್ಯದಲ್ಲಿಯ ಸಾಮಾನ್ಯ ಆಚರಣೆಯು ಚಕ್ರವರ್ತಿಯು ನೀಚ ಕಾರ್ಯಗಳನ್ನು ಮಾಡಿದ್ದರೂ ಅವನನ್ನು ಪೂಜಿಸುವುದಾಗಿತ್ತು. ಹೀಗಿದ್ದರೂ ಮಾನವ ಚಕ್ರವರ್ತಿಗಳಿಗೆ ದೇವತೆಗಳು ನೈತಿಕವಾದ ಸುಧಾರಣೆಗಳಿಗಾಗಿರಲಿಲ್ಲ. ಆದುದರಿಂದ ವಿಗ್ರಹಾರಧನೆಯು ಬಹಳವಾಗಿ ಅನೈತಿಕವಾದದ್ದಾಗಿತ್ತೆಂದು ವಿವರಿಸಿದ್ದರಲ್ಲಿ ಆಶ್ಚರ್ಯವಿರುವದಿಲ್ಲ.

## ಸಾಮಾನ್ಯ ನೀತಿನಿಯಮ

ವರ್ಷಗಳಲ್ಲೆಲ್ಲಾ ಬೈಬಲಿನ ಬೋಧನೆಗಳನ್ನು ವಿರೋಧಿಸಿದವರು ಅನೈತಿಕತೆಯನ್ನು ಬೋಧಿಸಿದ್ದಾರೆ. ಅವರು ಬೋಧಿಸಿದ್ದನ್ನು ಆಚರಿಸಿದ್ದಾರೆ. “ನಾಸ್ತಿಕತ್ವವು ದುಷ್ಟ ಮನುಷ್ಯನನ್ನು ಒಳ್ಳೆಯವನನ್ನಾಗಿ ಮಾಡುವದಿಲ್ಲ” ಎಂಬುದು ಒಪ್ಪಿಕೊಳ್ಳತಕ್ಕದ್ದಾಗಿದೆ. ಇದಕ್ಕೆ ವಿರುದ್ಧವಾಗಿ, ಕ್ರೈಸ್ತವ್ಯಕ್ತಿ ತನ್ನನ್ನು ಕೊಡುವವನು ಸತತವಾಗಿ ದುಷ್ಟತ್ವದಿಂದ ಆದರ್ಶವಾದ ನೀತಿಯ ನಡತೆಗೆ ತಿರುಗಿಕೊಳ್ಳುತ್ತಾನೆ. ಬೈಬಲಿನ ಬೋಧನೆಯು ನೈತಿಕ ಮಟ್ಟವನ್ನು ಸ್ಪಷ್ಟವಾಗಿ ಮೇಲಕ್ಕೆ ಎತ್ತುತ್ತದೆ.

## ಕೆಲಸದ ಘನತೆ

ಕೈಕೆಲಸವು ಒಮ್ಮೆ ಸ್ವಯಂ - ಗೌರವದ ಮನುಷ್ಯನ ಮಟ್ಟಕ್ಕಿಂತ ಕೆಳಗಿನದು ಎಂದು ಯೋಚಿಸಲ್ಪಡುತ್ತಿತ್ತು. ಅದು ಕೇವಲ ಗುಲಾಮರೊಂದಿಗೆ ಸಂಬಂಧಿಸಲ್ಪಟ್ಟಿತ್ತು. ಕೈಕೆಲಸವು ಕೀಳುಮಟ್ಟಕ್ಕೆ ಇಳಿಸುವುದಾಗಿದೆ ಎಂದು ಪ್ಲ್ಯಾಟೋ ಮತ್ತು ಅರಿಸ್ಟೋಟಲ್ ಬೋಧಿಸಿದರು. ಚಕ್ರವರ್ತಿ ಔಗುಸ್ತನು ಒಮ್ಮೆ ಒಬ್ಬ ಸ್ನೇಹಿತನಿಗಾಗಿ ಸಹಾಯ ಮಾಡಲು ತೋಟದಲ್ಲಿ ಕೆಲಸಮಾಡಿದ ಒಬ್ಬ ಸೆನೇಟರನಿಗೆ ಶಿಕ್ಷೆವಿಧಿಸಿದನೆಂದು ಹೇಳಲ್ಪಟ್ಟಿದೆ. ಹೀಗಿದ್ದರೂ ಯೇಸುವಿನ ಬಡಿಗತನ ಮತ್ತು ಪೌಲನ ಗುಡಾರ ನೇಯುವ ಕೆಲಸವು, ಕೈಕೆಲಸವು “ಗುಲಾಮತ್ವವಾಗಿರುವದಿಲ್ಲ” ಎಂಬುದನ್ನು ಅರಿತುಕೊಳ್ಳಲು ಜನರಿಗೆ ಸಹಾಯವಾಯಿತು. ಕೈಕೆಲಸವು ಗೌರವಿಸಲ್ಪಡಲು ಪ್ರಾರಂಭಿಸಲ್ಪಟ್ಟಿತು. ಇಂಥ

ಅಭಿಪ್ರಾಯವು ಈಗ ಕ್ರೈಸ್ತೇತರರಲ್ಲಿಯೂ ಸ್ವಾಭಾವಿಕವಾಗಿ ತೆಗೆದುಕೊಳ್ಳಲ್ಪಡುತ್ತಲಿದೆ. ಹೀಗೆ ಕ್ರೈಸ್ತತ್ವವು ನೈತಿಕ ಮತ್ತು ಆತ್ಮಿಕ ಜಗತ್ತಿನ ಮೇಲೆ ಪರಿಣಾಮ ಮಾಡಿತು. ಹಾಗೆಯೇ ವ್ಯವಹಾರಿಕ ಜಗತ್ತಿನ ಮೇಲೆಯು ಪರಿಣಾಮ ಮಾಡಿದೆ.

## ಜೀವನದ ಕಡೆಗೆ ಮನೋಭಾವನೆಗಳು

ಬೈಬಲಿನಲ್ಲಿ ನಂಬಿಕೆಯಿರುವ ಜನರ ಜೀವನವನ್ನು ಆಶಾರಹಿತವಾದ ದೃಷ್ಟಿ ಕೋನದಿಂದ ನೋಡುತ್ತಾರೆ. ಬೆರ್ಟ್ರಾಂಡ್ ರಸ್ಸೆಲ್‌ನ ಮನೋಭಾವನೆಯು ತಿರಸ್ಕಾರ ಭಾವದ್ದಾಗಿತ್ತು:

> ನಾವು ಜೀವಿಸುತ್ತಿರುವ ಜಗತ್ತನ್ನು ಗಲಿಬಿಲಿ ಹಾಗೂ ಅವಘಡದ ಪರಿಣಾಮದಂತೆ ಅರ್ಥಮಾಡಿಕೊಳ್ಳಬಹುದು; ಆದರೆ ಅದು ಉದ್ದೇಶ ಪೂರ್ವಕವಾದ ಕಾರಣದ ಫಲವಾಗಿದ್ದರೆ, ಉದ್ದೇಶವು ಒಬ್ಬ ಪಿಶಾಚಿಯದಾಗಿದ್ದಿರಬೇಕು; ನನ್ನ ಪರವಾಗಿ, ಅವಘಡವನ್ನು ಕಡಿಮೆ ನೋವಿನದಾಗಿಯೂ ಹೆಚ್ಚು ತೋರಿಕೆಯ ಊಹಾಪ್ರಜ್ಞೆಯಾಗಿ ನನಗೆ ಕಂಡು ಬರುತ್ತದೆ.[1]

ಪ್ರಸಿದ್ಧ ಪಂಡಿತ, ಲುಕ್ರೆಟಿಯಸ್‌ನು ಜೀವನವನ್ನು "ಕತ್ತಲೆಯಲ್ಲಿ ಒಂದು ಉದ್ದವಾದ ಹೋರಾಟ"[2] ಎಂದು ವಿವರಿಸಿದ್ದಾನೆ. ಈ ಮನೋಭಾವನೆಯನ್ನು ಹಂಚಿಕೊಳ್ಳುವ ಜನರು ತಾವು ಯಾಕೆ ಈ ಜಗತ್ತಿನಲ್ಲಿ ಇರುವೆವೆಂಬುದನ್ನು ತಿಳಿದು ಕೊಂಡಿರುವದಿಲ್ಲ. ಕೆಲವರಿಗೆ ಆತ್ಮಹತ್ಯೆಯು ಸಂತೋಷಕರವಾದ ಯೋಚನೆಯಾಗುತ್ತದೆ. ಜೀವನದ ಉದ್ದೇಶಕ್ಕಾಗಿ, ಅವಿಶ್ವಾಸಿಯು ಖಾಲಿಯಾದ ತತ್ವಜ್ಞಾನವನ್ನು ಮಾತ್ರ ಕೊಡಬಲ್ಲನು. ಪ್ರಾಣವಿಲ್ಲದ ಭೂಮಿಯನ್ನು ಬೆಳಗಿಸಲು ಬರಿದಾದ ಆಕಾಶದಿಂದ ಸೂರ್ಯನ ಬೆಳಕನ್ನು ಅವರು ಗಮನಿಸುತ್ತ ಕೇವಲ ಏಕಾಂಗಿತನದಲ್ಲಿ ಬಿಡಲ್ಪಟ್ಟಿರುವರು. ಅವರದು ನಿರಾಶೆಯ ಸಾಮ್ರಾಜ್ಯವಾಗಿದೆ.

ಪ್ರಶ್ನಿಸುವವನಿಗೆ ಒಬ್ಬ ನಾಸ್ತಿಕ ತತ್ವಜ್ಞಾನಿ ಕೊಡಬಹುದಾದ ಕೇವಲ ಪ್ರೋತ್ಸಾಹವು "ತಿಳಿಯಲಾರದ್ದನ್ನು ಯೋಚಿಸು" ಎಂಬುದು. ಇದಕ್ಕೆ ವಿರುದ್ಧವಾಗಿ ವಿಶ್ವಾಸಿಗಳು ಆಶಾವಾದವನ್ನೂ ಆದರಣೆಯಿಂದಲೂ ಆನಂದವಿಂದಲೂ ತುಂಬಿದ ಉದ್ದೇಶಗಳ ಸೇವೆ ಮಾಡುವ ಜೀವಿತವನ್ನು ಅನುಭವಿಸುವರು.

## ಮರಣದ ಕಡೆಗೆ ಮನೋಭಾವನೆಗಳು

ಅವಿಶ್ವಾಸಿಗಳು ಮರಣದ ಬಗ್ಗೆ ಯೋಚಿಸುವಾಗ ದುಃಖಿತರೂ ಶೋಚನೀಯ ವಾದವರೂ ಆಗುತ್ತಾರೆ. ಲುಕ್ರೆಟಿಸ್‌ನು, "ತನ್ನ ಯಾತನೆಗೊಳಗಾದ ಹೃದಯವನ್ನು ಸರ್ವನಾಶನದ ಹಿಮದಂಥ ಅನೆಸ್ತೇಶಿಯದಿಂದ ಮರಗಟ್ಟಿಸಲು ಹುಡುಕಿದನು" ಇನ್ನೊಬ್ಬನು ಹೀಗೆ ಹೇಳಿದ್ದಾನೆ:

> ಕ್ರಿಸ್ತನ ಪಾದಗಳ ಮುಂದೆ ಇನ್ನೂ ತಲೆಬಾಗುವವರು ದಾಯಿಹೋಗುವ ಸಮಯದ ವೇದನೆಯ, ಏಕಾಂಗಿತನ ಮತ್ತು ಬರಲಿಕ್ಕಿದ್ದ ಸರ್ವನಾಶನದ ವೇದನೆಯ ಬಗ್ಗೆ ಏನನ್ನು ತಿಳಿದಿರುವದಿಲ್ಲ. ಭರವಸೆಯಿಂದ, ಸಮಾಧಾನದಿಂದ ಅವರು ತಮ್ಮ ಮಾರ್ಗದಲ್ಲಿ ಹೋಗುವರು. ಅವರ ಪ್ರಕಾಶಮಾನವಾದ ಭ್ರಮೆಯನ್ನು

> ಹೊಂದಿಕೊಳ್ಳಲು ನನ್ನ ಜೀವವನ್ನು ಕೊಡುವೆನು. ... ಈ ವಿಶ್ವಾಸ ತಪ್ಪಿದರೆ ಯಾವ ಸಂಗತಿಗಾದರೂ ಯಾವ ನಿರೀಕ್ಷೆಗಾದರೂ ಯಾವ ಅಮರತ್ವಕ್ಕಾದರೂ ಅಂಟಿಕೊಳ್ಳುವೆನು - ಆದರೆ ಯಾವುದೂ ಇರುವದಿಲ್ಲ. ಕ್ರಿಸ್ತನ ಸದಾಕಾಲ ಹೊಳೆಯುವ ಈ ವ್ಯಕ್ತಿತ್ವದ ಹೊರಗೆ ಪ್ರತಿಯೊಂದೂ ಭಯಾನಕತೆಯೂ ಅಂಧಕಾರವೂ ಆಗಿದೆ.

ವೊಲ್ಟೇರ್ ಡೇವಿಡ್ ಹ್ಯೂಮ್ ಮತ್ತು ಥೊಮಸ್ ಪೈನ್ ಎಂಬವರಂಥ ಅವಿಶ್ವಾಸಿಗಳು ತಮ್ಮ ಮರಣದ ಹಾಸಿಗೆಯ ಮೇಲಿದ್ದಾಗ ತಮ್ಮ ಪ್ರತಿಕ್ರಿಯೆಯನ್ನು "ಭಯಾನಕತೆ" ಎಂಬ ಪದದಿಂದ ವಿವರಿಸಲ್ಪಟ್ಟಿದೆ. ಪೌಲ, ಯೋಹಾನ ಮತ್ತು ಪೊಲಿಕಾರ್ಪರಂಥ[3] ನಂಬಿಗಸ್ತ ವಿಶ್ವಾಸಿಗಳು ತಮ್ಮ ಅಂತಿಮ ದಿನಗಳನ್ನು ಸಮರ್ಪಿಸಿದಾಗ ಅವರ ವಿಚಾರಗಳು ಆನಂದದಾಯಕವಾಗಿಯೂ ಸುಂದರವಾಗಿಯೂ ಆಗಿದ್ದಿರಲೇ ಬೇಕು. ಮರಣದ ಸಮಯದಲ್ಲಿ ಕ್ರೈಸ್ತತ್ವಕ್ಕಿರುವ ಪರಿಣಾಮವು ಬಂಗಾರಕ್ಕಿಂತಲೂ ಹೆಚ್ಚು ಶ್ರೇಷ್ಠವಾದದ್ದಾಗಿದೆ.

## ಕ್ರೈಸ್ತತ್ವದ ಇತರ ಪರಿಣಾಮಗಳು

ಕ್ರೈಸ್ತತ್ವದ ಪ್ರಮುಖ ಉದ್ದೇಶವು ಪಾಪಿಗಳನ್ನು ದೇವಭಕ್ತರಾಗಿ ಬದಲಾಯಿಸುವುದು. ಹೀಗಿದ್ದರೂ ಆ ಪ್ರಮುಖವಾದ ಉದ್ದೇಶವು ಅನೇಕ ಲಾಭಕರವಾದ ಪರಿಣಾಮಗಳೊಂದಿಗೆ ಬಂದಿದೆ.

### ಶಿಕ್ಷಣ

ಶಿಕ್ಷಣ ಕ್ಷೇತ್ರದಲ್ಲಿ ಕ್ರೈಸ್ತತ್ವವು ಅದ್ಭುತಕರವಾದ ಪರಿಣಾಮ ಮಾಡಿದೆ. 1550 ಹಾಗೂ 1700ರ ಮಧ್ಯದಲ್ಲಿ, ಯುರೋಪಿನಲ್ಲಿ ಇಪ್ಪತ್ತು ಮಹಾ ವಿಶ್ವವಿದ್ಯಾಲಯಗಳು ಎಲ್ಲವೂ ಬೈಬಲ್ ವಿಶ್ವಾಸಿಗಳಿಂದ ಸ್ಥಾಪಿಸಲ್ಪಟ್ಟವು. ಯು. ಎಸ್. ದಲ್ಲಿ ಧಾರ್ಮಿಕ ಜನರು ಸುಮಾರು ಪ್ರತಿಯೊಂದು ಮಹಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು. ಅವಿಶ್ವಾಸಿಗಳು ಈ ಶಾಲೆಗಳಲ್ಲಿ ಒಳಹೊಕ್ಕಿದ್ದು ದುಃಖಕರವಾದ ಸಂಗತಿ. ಆದರೆ ಅದು ಶಾಲೆಗಳನ್ನು ಪ್ರಾರಂಭಿಸಿದ ಕ್ರೈಸ್ತತ್ವದ ಪ್ರಭಾವವನ್ನು ಕುಂದಿಸಲಿಲ್ಲ. ಎಲ್ಲಾ ರಾಷ್ಟ್ರಗಳಲ್ಲಿ, ಬೈಬಲ್ ಬೋಧಿಸಿದ ಎಲ್ಲಾ ಕಡೆಗಳಲ್ಲಿ ಸಾಕ್ಷರತೆಯ ಪ್ರಮಾಣವು ಹೆಚ್ಚಾದ ಮಟ್ಟದಲ್ಲಿದೆ.

### ಸಾಹಿತ್ಯ

ಎಲ್ಲಾ ಇತರ ಪುಸ್ತಕಗಳು ಬೈಬಲನ್ನು ಅರಗಿಸಿಕೊಂಡು ಬರೆಯಲ್ಪಟ್ಟವುಗಳಾಗಿವೆ ಎನ್ನುವಷ್ಟು ಒಳ್ಳೇ ಸಾಹಿತ್ಯದ ಮೇಲೆ ಬೈಬಲು ಅಪಾರವಾದ ಪ್ರಭಾವ ಬೀರಿರುತ್ತದೆ. ಬೈಬಲಿನ ನಾಲ್ಕು ಸಾಹಿತ್ಯದ ಲಕ್ಷಣಗಳು ಅದರ ಶ್ರೇಷ್ಠತೆಯ ಕಾರಣಗಳಿಗಾಗಿ ಯಾದಿ ಮಾಡಲ್ಪಟ್ಟಿವೆ: ವಿವಿಧತೆ, ಬಲ, ಸಾರ್ವತ್ರಿಕತೆ ಹಾಗೂ ಸೌಂದರ್ಯ. ಹೆಚ್ಚಾದ ಭಾಗಗಳಿಗೆ, "ಪರಿಶುದ್ಧ ಬರಹದ ಪ್ರಭಾವದ ಬಂಗಾರದ ಎಳೆಯು" ಇಂಗ್ಲೀಷ್ ಸಾಹಿತ್ಯದ ಸರಣಿಯಲ್ಲಿ ವಿಪುಲ ಐಶ್ವರ್ಯದ್ದೂ ಹಾಗೂ ಅತೀ ಹೆಚ್ಚು ಸುಂದರವಾದದ್ದೂ ಆಗಿದೆ. "ಸಾಮಾನ್ಯವಾಗಿ ಕೇವಲ ಅಲಂಕಾರಿಕ ಕೂಡಿಸುವಿಕೆಯಾಗಿರದೇ ವಸ್ತ್ರದ ಹಾಸುಹೊಕ್ಕಿನಂತಿರುತ್ತದೆ. ಅದನ್ನು ತೆಗೆದು ಹಾಕಿದರೆ ಎಲ್ಲವನ್ನೂ ಬಿಚ್ಚುವಂಥದ್ದೂ ನಾಶಮಾಡುವಂಥದ್ದೂ ಆಗುತ್ತದೆ."

**ಕಲೆ**

ಜಗತ್ತಿನ ಅತೀ ಹೆಚ್ಚಾಗಿ ಸಂಗ್ರಹ ಯೋಗ್ಯವಾದ ಪೇಂಟಿಂಗುಗಳು ಬೈಬಲ್ ಮುಖ್ಯ ಪ್ರಸ್ತಾಪಗಳ ಮೇಲೆ ಅವಲಂಭಿಸಿರುತ್ತವೆ. ಅವುಗಳಲ್ಲಿ ಬಹಳವಾಗಿ ಪ್ರಸಿದ್ಧವಾದವುಗಳು - Leonardo da Vinci's "The Last Supper," Raphael's "The Sistine Madonna," Van Dyck's "Christ and the Tribute Money," and Rembrandt's "The Prodigal Son."

## ಬದಲಾದ ಜಗತ್ತು

ಕ್ರೈಸ್ತತ್ವದ ಹುಳಿಹಿಟ್ಟು ಪ್ರಸರಿಸಿದಲ್ಲೆಲ್ಲಾ ನೈತಿಕ ಹಾಗೂ ಆತ್ಮಿಕ ಜಗತ್ತು ಪ್ರಶ್ನೆಯಿಲ್ಲದೇ ಬದಲಾವಣೆ ಹೊಂದಿರುತ್ತವೆ. ಬೈಬಲಿನ ಯಾವುದೇ ಅದ್ಭುತಕ್ಕಿಂತಲೂ ಹೆಚ್ಚಾದ ರೀತಿಯಲ್ಲಿ ಬದಲಾವಣೆಯು ವಿಸ್ತರಿಸಲ್ಪಟ್ಟಿದೆ ಎಂದು ಯೋಚಿಸಲಾಗಿದೆ. "ಕಲಿಯದೇ ಇದ್ದ ಗಲಿಲಾಯದ" ಬಡಿಗನು ದೇವರ ಜ್ಞಾನವನ್ನು ಭೂಲೋಕವೆಲ್ಲಾ ತುಂಬಿಕೊಂಡಿರುವಂತೆ ಮಾಡಿದ್ದು, ಕೇವಲ ಮನುಷ್ಯನು ಸಾಗರವನ್ನು ಮಾಡುವದಕ್ಕಿಂತಲೂ ಹೆಚ್ಚಿನದಾಗಿ ಕಂಡುಬರುತ್ತದೆ. ಜೆನೋ, ಪ್ಲ್ಯಾಟೋ, ಸಾಕ್ರೇಟಿಸ್ ಮತ್ತು ಇತರ ಅನೇಕರು ಕಾರ್ಯಸಾಧಕ ಬೋಧನೆಗಳನ್ನು ಮುಂದಿಡಲು ವ್ಯರ್ಥ ಪ್ರಯತ್ನ ಮಾಡಿದರು. ಆದರೆ ಯೇಸು ಹೆಚ್ಚಾದ ಜಗತ್ತಿಗಾಗಿ ಜೀವನದ ನೂತನ ಮಾರ್ಗವನ್ನು ಬೋಧಿಸಿದನು ಹಾಗೂ ಸ್ಥಾಪಿಸಿದನು.

ಇದಲ್ಲದೇ, ಕ್ರೈಸ್ತತ್ವದ ಆಶ್ಚರ್ಯಕರವಾದ ಸಂಗತಿಯು ಪುರಾತನರಿಗೆ ಅಸಾಧ್ಯವಾದ ಸಂಗತಿಯಾದದ್ದು ಆಗಿತ್ತು: ಒಂದು ದಿನದಲ್ಲಿ ಭಿನ್ನವಾದ ಜನಾಂಗಗಳನ್ನು ಒಂದುಗೂಡಿಸುವುದು. "ಏಸಿಯಾದಲ್ಲಿ, ಯುರೋಪಿನಲ್ಲಿ ಹಾಗೂ ಲಿಬ್ಯದಲ್ಲಿ ಗ್ರೀಕರೂ ಅನಾಗರಿಕರೂ ಎಂದಾದರೂ ಧರ್ಮದ ಒಂದೇ ಪದ್ಧತಿಯೊಳಗೆ ಒಂದಾಗುವದನ್ನು ಕಲ್ಪಿಸುವ ಮನುಷ್ಯನು ಬಹಳ ಬಲಹೀನನಾಗಿರಬೇಕು" ಎಂದು ಸೆಲ್ಸಸ್‌ನು ಹೇಳಿದನು.

ಕ್ರೈಸ್ತತ್ವದ ಪ್ರಭಾವದ ವಿಶಾಲತೆಯ ಮತ್ತು ವಿವಿಧತೆಯ ಯೋಚನೆಯು ಪ್ರತಿಯೊಂದು ಮಾನವ ವಿವರಣೆಯನ್ನು ಸಾಕಾಗದಷ್ಟನ್ನಾಗಿ ಮಾಡುತ್ತದೆ. ಧರ್ಮನಿಂದಕ ಇತಿಹಾಸಕಾರನಾದ ಎಡ್ವರ್ಡ್ ಗಿಬ್ಬೋನ್ ಎಂಬುವನು ಕ್ರೈಸ್ತತ್ವದ ಬೆಳವಣಿಗೆಯ ಬಗ್ಗೆ ಹೆಚ್ಚು ಸಂಗತಿಗಳನ್ನು ತಿಳಿದವನು, ಬೆಳವಣಿಗೆಗೆ ಮಾನವ ಕಾರಣಗಳನ್ನು ಅನ್ವಯಿಸಲು ಒತ್ತಾಯ ಹೊಂದಿದನು. ಐದು ಕಾರಣಗಳನ್ನು ಅವನು ಯಾದಿ ಮಾಡಿದನು: ಆಸಕ್ತಿ, ಭವಿಷ್ಯದ ಜೀವನದ ಬೋಧನೆ, ಅದ್ಭುತ ಶಕ್ತಿಯಿರುವ ಭಾವನೆ, ಶುದ್ಧ ನೈತಿಕತೆಗಳು ಹಾಗೂ ಶಿಸ್ತು ಪಾಲನೆ. ಹೀಗಿದ್ದರೂ ಇವುಗಳಲ್ಲಿ ಪ್ರತಿಯೊಂದೂ ಯೇಸುವು ಬರುವದಕ್ಕಿಂತ ಮುಂಚಿತವಾಗಿಯೇ ಅಸ್ತಿತ್ವದಲ್ಲಿದ್ದವು. ಈ ಐದು ಕಾರಣಗಳು ಕ್ರೈಸ್ತತ್ವದ ಅದ್ವಿತೀಯವಾದ ಭಿನ್ನತೆ ಮತ್ತು ಪರಿಣಾಮಗಳನ್ನು ಸಾಕಷ್ಟು ವಿವರಣೆ ಮಾಡಲು ಸೋತುಹೋದವು. ಯೇಸುವಿಗೆ ದೈವತ್ವವನ್ನು ಹೊಂದಿಸುವದನ್ನು ತಪ್ಪಿಸಲು ಸಿದ್ಧವಾದ ಪ್ರತಿಯೊಂದು ವಿವರಣೆಯನ್ನು ಕೊಡಲು ಅವರು ಅಭ್ಯಾಸದ ಪ್ರಯತ್ನ ಮಾಡಿದ್ದರೆಂದು ತೋರುತ್ತದೆ. ಅದೇ ಚರಿತ್ರೆಗಾರನು, "ರೋಮನ್ ಜಗತ್ತಿನಲ್ಲಿ ಪ್ರಬಲವಾಗಿದ್ದ ಆರಾಧನೆಯ ವಿವಿಧ ವಿಧಾನಗಳು ಸಮನಾಗಿ ಸತ್ಯವಾದವುಗಳೆಂದು ಜನರಿಂದ ಯೋಚಿಸಲ್ಪಟ್ಟವು; ಹಾಗೆಯೇ ತತ್ವಜ್ಞಾನಿಯಿಂದ ಅಷ್ಟೇ ಸುಳ್ಳಿನಂತೆಯೂ; ಹಾಗೂ ನ್ಯಾಯಾಧೀಶನಿಂದ ಅಷ್ಟೇ ಉಪಯುಕ್ತವಾದವುಗಳಂತೆಯೂ ಯೋಚಿಸಲ್ಪಟ್ಟವು" ಎಂದು ಹೇಳಿದ್ದಾನೆ.[4]

ಕ್ರೈಸ್ತತ್ವದ ಬಗ್ಗೆ ಅವಿಶ್ವಾಸಿಗಳು ಏನನ್ನೇ ಹೇಳಲಿ, ಬೈಬಲ್ ಬೋಧನೆಯಿಂದ ಈ ಜಗತ್ತಿಗೆ ತರಲ್ಪಟ್ಟ ಶ್ರೇಷ್ಠವಾದ ಲಾಭಗಳನ್ನು ಅವರು ದಿನದಿನವೂ ಅನುಭವಿಸಿದರು. ಬೆಳೆಯುತ್ತಿರುವ ನಾಸ್ತಿಕತೆಗೆ ವಿರುದ್ಧವಾಗಿ ಹೋರಾಡುವಲ್ಲಿ, ಅವರು ಅದನ್ನು ನಾಶಪಡಿಸುವದರಲ್ಲಿ ತಮ್ಮ ಶಕ್ತಿಯೊಳಗಿರುವ ಪ್ರತಿಯೊಂದನ್ನೂ ಮಾಡುತ್ತಿರುವರು. ಅದು ಅವರನ್ನೂ ಅವರ ಕುಟುಂಬಗಳನ್ನೂ ಆಶೀರ್ವದಿಸಲಿ.

## ಮುಕ್ತಾಯ

ಬೈಬಲ್ ಬೋಧನೆಯು ಜೀವನದ ಪ್ರತಿಯೊಂದು ಕ್ಷೇತ್ರದ ಮೇಲೆ ಪರಿಣಾಮ ಬೀರಿದೆ. ಬೈಬಲು ಮಾನವ ನಿರ್ಮಿತ ಪುಸ್ತಕಕ್ಕಿಂತ ಹೆಚ್ಚಿನದಾಗಿದೆಯೆಂದು ಗುರುತಿಸುವುದು ಯುಗಗಳಲ್ಲಿ ಅತ್ಯಾಶ್ಚರ್ಯಕರವಾದದ್ದಾಗಿದೆ. ಅದರ ಪ್ರಭಾವದ ಪುರಾವೆಯು ದೇವರಿಂದಾದ ಅದರ ಪ್ರೇರಣೆಯನ್ನು ತೋರಿಸುತ್ತದೆ.

---

ಟಿಪ್ಪಣಿಗಳು

[1]Bertrand Russell, *Why I Am Not a Christian* (New York: Simon and Schuster, 1957), 93. [2]Lucretius, *On the Nature of Things*, quoted in John Bartlett, Bartlett's Familiar Quotations, 16th ed., ed. Justin Kaplan (Boston: Little, Brown and Co., 1992), 89. [3]ಪೊಲಿಕಾರ್ಪನು ಸ್ಮುರ್ನದಲ್ಲಿ ಆದಿ ಕ್ರೈಸ್ತರ ಮಧ್ಯದಲ್ಲಿ ಒಬ್ಬ ನಾಯಕನಾಗಿದ್ದನು. ಅದು ಆಸಿಯದ ಏಳು ಸಭೆಗಳಲ್ಲಿ ಒಂದು ಸಭೆಯಾಗಿತ್ತು, ಅವನು ಅಲ್ಲಿಯ ಸಭೆಯ ಒಬ್ಬ ಸಭಾ ಹಿರಿಯನಾಗಿದ್ದಿರಬೇಕು. [4]Edward Gibbon, *The History of the Decline and Fall of the Roman Empire*, quoted in Bartlett, 340.

© 2009 Truth for Today